ಸದಾ ಪೊರೆಯುತ್ತಿರುವೆನು.

'ಲಲನೆ, ನೀನು ಯಾವ ಬಯಕೆಯಿಂದ ಹೀಗೆ ಹೊಚ್ಚಹೊಸ ಯೌವನದ ಕಿರು ಹರೆಯದಲ್ಲಿಯೆ ತಪವನ್ನು ಆಚರಿಸಿ, ಕೋಮಲ ಶರೀರವನ್ನು ಕ್ಷಯಿಸುತ್ತಿರುವೆ ಹೇಳು? ಈ ಬಗೆಯ ಕ್ರೂರತರವಾದ ಯಜ್ಞ ನನಗೆ ಪ್ರಿಯವಾದುದಲ್ಲ! ಓ ಸುಂದರಿಯೆ, ಏತಕ್ಕೆ ಈ ತಪ? ನೀನು ಯಾರು? ನಿನ್ನ ಪ್ರಾರ್ಥನೆಯೇನು?'

'ಪ್ರೇಮನಿಧಿ, ಓ ರತಿಪತಿಯೆ, ಮದನದೇವನೆ ನಮೋ! ನಾನು ಒಂದೇ ದಿನದಲ್ಲಿ ಯುಗದ ತಪವನ್ನು ಆಚರಿಸಿ ಬೆಂದು ನೊಂದಿರುವೆ! ದೇವನೇ, ನಿನಗೆ ತಿಳಿಯದಿರುವುದು ಯಾವುದಿದೆ?

'ನಾನು ಮಣಿಪುರದ ರಾಜನಂದಿನಿ. ಚಿತ್ರವಾಹನನ ಮಗಳು. ನನ್ನ ಹೆಸರು ಚಿತ್ರಾಂಗದೆ. ಪುಷ್ಪಾಸ್ತ್ರನೇ, ನನ್ನ ತಂದೆಗೆ ಚಂದ್ರಚೂಡ ಶಿವನು ಕೃಪೆದೋರಿ 'ಸಂತತಿಯಲ್ಲಿ ಒಂದೇ ಒಂದು ಪುತ್ರ ಸಂತಾನವಾಗಲಿ' ಎಂದು ವರವನ್ನು ನೀಡಿದ್ದನು. ಆದರೆ ನಿರ್ಭಾಗ್ಯೆ ಕಠಿನೆಯಾದ ನಾನು, ನನ್ನ ತಂದೆಗೆ ಬಿಡದೆ ಪುತ್ರಿಯಾಗಿ ಜನಿಸಿದೆನು. ಹೆಣ್ಣಾಗಿದ್ದರೂ, ಭಾವದಲ್ಲಿ ನಿಷ್ಠುರೆಯಾಗಿಯೇ ಹುಟ್ಟಿದೆನು! ನನ್ನ ತಂದೆಯು ನನ್ನನ್ನು ಕುಮಾರನೆಂದೇ ತಿಳಿದು ರಣಕಲಾ ಪಂಡಿತೆಯನ್ನಾಗಿಸಿದನು.

'ಓ ಇಕ್ಷುಕೋದಂಡಪಾಣಿ, ನಾನು ಕವಚಧಾರಿಗಳಾದ ವೈರಿಗಳ ಎದೆಯನ್ನು ಬಿರಿಯುವ ಚೂಪಾದ ಬಾಣವನ್ನು ಪ್ರಯೋಗಿಸುವ ಬಿಲ್ಲಿನ ಪರಿಣತಿಯನ್ನು ಪಡೆದೆನು. ಆದರೆ ನಾನು ಚೆನ್ನ ಚೆಲುವರನ್ನು ಗೆದ್ದು ಅವರನ್ನು ಸೆರೆಹಿಡಿಯುವ ಕನ್ನೆಯರ ಕಡೆಗಣ್ಣ ನೋಟಗಳ ಜಾಣ್ಮೆಯನ್ನು ಇನಿತೂ ತಿಳಿಯದಿರುವ ಮುಗ್ಧೆಯಾದೆನು.

'ನನ್ನ ಆಸೆಗಳ ಕಿರೀಟದ ಮಾಣಿಕ್ಯವೆಂದರೆ ಶ್ರೀಕೃಷ್ಣ ಮಿತ್ರ ಅರ್ಜುನದೇವ. ಅವನು ಯತಿವೇಷದಲ್ಲಿ ಹತ್ತಿರದ ಕಾಡಿನಲ್ಲಿರುವನು. ನಾನು ಅವನ ಬಳಿ ಹೋದೆನು. ನನ್ನ ಜೀವ ಪುಷ್ಪವನ್ನು ಸಿರಿಪಾದದಲ್ಲಿ ಧರಿಸಿ ಸಾರ್ಥಕವಾಗಿಸಿ ಕೃಪೆತೋರಬೇಕೆಂದು ಬೇಡಿಕೊಂಡೆನು. ಅವನು ಬ್ರಹ್ಮಚರ್ಯ ವ್ರತವನ್ನು ಹೇಳಿ ಜಾರಿಕೊಂಡನು.

'ಓ ಕಂದರ್ಪನೇ, ಅದನ್ನು ಮತ್ತೆ ಹೇಗೆ ಹೇಳಲಿ? ದೇವನೇ, ನನ್ನನ್ನು ಕಾಡು ಹೆಣ್ಣೆಂದು ಹೀಯಾಳಿಸಿದನು.'

ಹೀಗೆ ಹೇಳುತ್ತ ಹೇಳುತ್ತ ಮಾತನಾಡಲಾಗ ಲಾರದೆ, ಲಲನೆಯು ಅಭಿಮಾನ ಭಂಗದ ಅತಿ ಶೋಕದಿಂದ ರೋದಿಸುತ್ತ ಒರಲಿದಳು. ಅವಳ ಅವಯವಗಳು ಕಂಪಿಸಿದವು. ಕಣ್ಣ ಕಮಲಗಳು ಮುಚ್ಚಿಕೊಂಡು ಕಂಬನಿಯ ಹೊನಲು ಹರಿದವು. ಕೊರಳ ಸರೆಯುಬ್ಬಿ ಕಂಠದಲ್ಲಿ ಗದ್ಗದ ದನಿ ಮೈದೋರಿತು. ಅದನ್ನು ಕಂಡು ಕನಿಕರಗೊಂಡ ದೇವ ರತಿಪತಿ ಹೀಗೆ ಹೇಳಿದನು:

ಗಿರಿಜೇಶನಂ ಗೆಲ್ದೆನಗೆ ಮತ್ತಾರು ಹೊಯಿಕ್ಕೆ?

'ಕಾಮಿನಿಯೆ, ಅಳಬೇಡ. ನನ್ನ ಭಕ್ತರನ್ನು ಎಂದಿಗೂ ನಾನು ಈ ಅಪ್ರಯೋಜಕವಾದ ವೈರಾಗ್ಯಕ್ಕೆ ಸೋಲಲು ಬಿಡುವುದಿಲ್ಲ. ವೈರಾಗಿಗಳ ಚಕ್ರವರ್ತಿ ಗಿರಿಜೇಶನನ್ನು ಗೆದ್ದಿರುವ ನನಗೆ ಮತ್ತ್ಯಾರು ಸಾಟಿ? ಲತಾಂಗಿಯೆ, ತ್ರಿಲೋಕವನ್ನು ಜಯಿಸಿದ ವಿಜಯನನ್ನು ಎಳೆತಂದು ನಿನ್ನ ಪಾದತಾವರೆಯ ಮಧುಮಯ ತಟಾಕ ತಟಿಗೆ ಕೆಡಹುವೆನು ಎಂದು ನಿನಗೆ ಅನುಗ್ರಹಿಸುತ್ತೇನೆ.

'ಇಂದುಮುಖಿಯೆ, ಲೆಕ್ಕವಿಲ್ಲದಷ್ಟು ವ್ರತಿಗಳು ನನ್ನ ಸಾಮರ್ಥ್ಯ, ಪರಾಕ್ರಮಕ್ಕೆ ಪೂರ್ಣವಾಗಿ ಸೋತಿದ್ದಾರೆ. ಅವರು ತಮ್ಮ ಜೀವಮಾನ ಸಾಧನೆಯ ಫಲಗಳನ್ನು ಅಂಗನೆಯರ ಅಂದಕ್ಕೆ ಸಮರ್ಪಿಸಿದ್ದಾರೆ. ಕಮಲನಾಭಕೃಷ್ಣನ ಸಖನ ತಪದ ಮಾತು ಹಾಗಿರಲಿ! ಕೇಳು, ನಾನು ಅದರ ವಿಸ್ತಾರವನ್ನು, ಆಳದ ನೆಲೆಯನ್ನು ಬಲ್ಲೆನು.

'ಅರ್ಜುನನ ವ್ರತವು ಮಕರಂದ ತುಂಬಿದ ಹೂವಿನ ಎದೆಯ ಅಂಚಿನಲ್ಲಿ ಕುಳಿತು ಬಾಯಾರಿದ ಭ್ರಮರವು ತತ್ತರಿಸುವ ಸಂಯಮದಂತಿದೆ! ಪರಾಜಯವೇ ಜಯವಾಗಿ, ಅದು ನಾಳೆಯ ದಿನವೇ ಮುಕ್ತಾಯವಾಗುವುದು!'

ಮದನನ ವಾಣಿಯನ್ನು ಕೇಳುತ್ತ ತರುಣಿ ಉಬ್ಬಿಹೋದಳು. ಬತ್ತಿದ ಸರೋವರಕ್ಕೆ ಹೊಸ ನೀರು ಬರುವಂತೆ, ಕತ್ತಲೆಯ ಕಗ್ಗವಿಗೆ ನೇಸರನು ಉದಯಿಸಿದಂತೆ ಆಶೆ ಬಾಲೆಯ ಎದೆತುಂಬಲು ನಿರಾಶೆ ತೊಲಗಿ ಹೋಯಿತು. ಕೃತಜ್ಞತೆಯಿಂದ ಕಂಬನಿ ಜಿನುಗುತ್ತಿರಲು,

'ಪ್ರೇಮ ಗುರುವೆ, ನನ್ನ ಒಡಲ ಸರಳ ಸಾಧಾರಣತೆ ಮಾಯವಾಗಿ ಹೋಗಲಿ. ಒಂದು ದಿನಕ್ಕಾದರೂ ರತಿಯ ರಮಣೀಯತೆ ಬರಲಿ. ವಿರಾಗಿ ಅರ್ಜುನನ ಎದೆಯ ಕೋಟೆಯನ್ನು ಪುಡಿ ಮಾಡುವಂತಹ ಶೃಂಗಾರ ಬಂದು ಸೇರಲಿ. ಹೇ ಅತನುದೇವನೆ, ನಾನು ದುಃಖಿತೆ! ಪ್ರಣಯಾರ್ಥಿ ನಾನು; ಇದೊ ಕೈ ಮುಗಿದು ಶರಣಾಗಿರುವೆ!'

ಎಂದು ಹೇಳಿ ಬಾಗಿ ವಂದಿಸಿದ ಚಿತ್ರಾಂಗದೆಯನ್ನು ಮನ್ಮಥನು ಎತ್ತಿದ್ದನು. ವರದ ಹಸ್ತದಿಂದ ಕೃಪೆದೋರುತ್ತ ಸವಿದನಿಯಲ್ಲಿ ಹೀಗೆ ಹೇಳಿದನು.

ಒಂದು ಮಾಸಂಬರಂ ಮೈಸಿರಿ ತುಂಬಿ ಬರಲಿ.

'ಕಮಲಮುಖಿಯೆ, ಏಳು. ನನ್ನ ರತಿಯ ಸಖಿಯೆ, ಏಳು. ನಿನ್ನ ಇಚ್ಛೆ ಗೆಲ್ಲುತ್ತದೆ. ನಿನ್ನ ಅಂಗದ ರಮ್ಯತಾ ದೀಪ ಜ್ವಾಲೆಯು ಪಾರ್ಥನ ವಿರಾಗ ಪತಂಗವನ್ನು – ಶೂನ್ಯತೆಯು ಗಾಳಿ ಯನ್ನು ಸೆಳೆಯುವಂತೆ ಸೆಳೆ ಸೆಳೆದು ಸುಟ್ಟುರಿಸಿ ಜಾಜ್ವಲ್ಯವಾಗುವಂತೆ ಮಾಡುತ್ತೇನೆ.

'ಪ್ರಿಯ ಶಿಷ್ಯೆಯೆ, ಒಂದು ದಿನವೇತಕ್ಕೆ, ಪೂರ್ಣ ಒಂದು ತಿಂಗಳು ಚೆಲುವಿನ ವಸಂತ ಬನದ ಹೂಗಳ ಮೈಯ ಸಿರಿಯು ನಿನ್ನ ಒಡಲನ್ನು ಪೂರ್ತಿ ತುಂಬಿ ಬರಲಿ. ದುಂಬಿಗಳ ಝೇಂಕಾರ, ಪಕ್ಷಿಗಳ ಇಂಚರ, ಚಂದ್ರನ ಸೂರ್ಯನ ಉದಯ ಅಸ್ತಗಳ ಪೆಂಪು ನಿನ್ನದಾಗಲಿ. ತೆಂಕಣ ಗಾಳಿಯ ತಂಪು, ಮಾವಿನ ಚಿಗುರ ಸೊಂಪು, ನೀರವ ರಾತ್ರಿಯ ನೀಲಿಮ ಆಗಸದಂಗಣದ ತಾರೆಗಳು ತುಂಬಿದ ಸೌಂದರ್ಯ ಸಂಪದ ನಿನ್ನದಾಗಲಿ.

'ಕಾಮನಬಿಲ್ಲಿನ ಬೆಡಗು, ಕಲಕಂಠ ಕೋಗಿಲೆಯ ಉಲಿತ, ಮಯೂರನ ನೃತ್ಯದ ಐಶ್ವರ್ಯ ನಿನ್ನಲ್ಲಿ ಮೂಡಲಿ. ಮೊದಲ ಹೊಸ ಮಳೆಯಲ್ಲಿ ಮಿಂದ ಮಲೆಗಳ ಹಸುರು, ಮೊರೆ ಮೊರೆಯುತ್ತ ನೊರೆ ಗರೆದು ಮಿರುಮಿರುಗಿ ಶಿಲೆಯಿಂದ ಶಿಲೆಗೆ ಚಿಮ್ಮಿ ನೆಗೆಯುವ ತೊರೆಯ ಲೀಲೆಯ ಮನೋಹರತೆ ನಿನ್ನಲ್ಲಿ ನಲಿಯಲಿ. ಹೀಗೆ ವಸಂತನ ಸರ್ವವೂ ನಿನ್ನ ಅಂಗೋಪಾಂಗವನ್ನು ಸುತ್ತಿ ಮುತ್ತಿ ಜಗನ್ಮೋಹನ ಜಾಲವನ್ನು ನೇಯಲಿ!

'ನಾನು ನಿನ್ನ ಜೊತೆಯಲ್ಲಿಯೇ ಇರುತ್ತೇನೆ. ನಿನ್ನ ಮೈಮುಡಿಗಳಿಂದ ಸೂಸುವ ಸುವಾಸನೆಗೆ ಸವ್ಯಸಾಚಿ ಅರ್ಜುನನ ನೋಂಪಿಯು ತಾನೇ ಮೈಮರೆಯುವಂತೆ ಮಾಡುತ್ತೇನೆ! ಏಳು, ಕಮಲ ಮುಖಿ ನೋಡು! ನೀನೀಗ ಅಂಗಜ ಮೋಹನ ದೀಪ ಶಿಖಿ!'

ಮಧುರರಸ ಹರ್ಷನಾದ ಕೇಳುತ್ತಿದ್ದಂತೆ ದರ್ಶನವು ಮರೆಯಾಯಿತು! ಚಿತ್ರಾಂಗದೆಯು ನಿಧಾನವಾಗಿ ಕಣ್ಣು ತೆರೆದಳು: ಅವಳು ಪುನರ್ಜನ್ಮ ಪಡೆದಂತೆ ಮಧುರಾನುಭವ ಸ್ವಪ್ನದ ಆನಂದದಿಂದ ಉಬ್ಬಿ ಹೊರಗೆ ನೋಡಿದಳು. ಸ್ವಪ್ನದಂತಹ, ಕಾಡನ್ನು ದಟ್ಟವಾಗಿ ಆವರಿಸಿದ ಬೆಳುದಿಂಗಳ ಮಾಯೆ ಕಾಣುತ್ತಿತ್ತು! ತೇನೆ ಹಕ್ಕಿ ಹಾಡುತ್ತಿತ್ತು!

3

## ಮಧುಮಯ ಪ್ರಣಯ ಪ್ರಸಂಗ

ಏಳು ವೀಣೆಯೆ! ಏಳು ಶೃಂಗಾರ ಸುಂದರಿಯೆ! ಅಂತರ್ಯದಲ್ಲಿರುವ ಚಿಂತನೆಯನ್ನು ಬೆಳಗಿಸುವ ಪ್ರತಿಭಾ ಮನೋಹರಿಯೆ ಏಳು! ಮುಂದಿನ ಕಥಾಭೋಗವನ್ನು ಮಧುಮಯ ಪ್ರಣಯ ಪ್ರಸಂಗವನ್ನು ಹೇಳು. ಕವಿಯಾದ ನಾನು ನಿರನುಭವಶಾಲಿ. ಆದುದರಿಂದ ನಿನ್ನನ್ನು ಬೇಡಿಕೊಳ್ಳುತ್ತಿರುವೆ. ಜಡಮತಿಗೆ ರಸಮಂತ್ರವನ್ನು ನೀಡು. ನಾದಮಯವಾದ ಕಾಮನಬಿಲ್ಲಿನ ತಂತಿಯಿಂದ ಮಾಡಿದ ಮಹಾ ಆಕಾಶವೀಣೆಯನ್ನು ಮಿಡಿದು ನನ್ನ ಎದೆಯನ್ನು ನುಡಿಸು!

ಹೂವಿನ ಮೃದು ಪಾದಗಳ ಉಷೆ ಹೆಣ್ಣು ಪೂರ್ವದ ಆಕಾಶ ಮತ್ತು ಭೂಮಿ ಸೇರುವ ಎಡೆಯಲ್ಲಿ ಕೆಂದುಟಿಯ ನಗೆ ಬೀರಿದಳು. ಹೊನ್ನಿನ ಕಿರಣಗಳ ಕೈಯಿಂದ ವಿಸ್ತಾರವಾದ ಭೂಮಿ ತಾಯಿಯ ಸಂಪದ್ಭರಿತ ಹಸುರು ಉಡುಗೆಯ ಮೇಲೆ ಹನಿಮುತ್ತುಗಳ ಮಂಗಳಾಕ್ಷತೆಯನ್ನು ಸಿಂಪಡಿಸಿದಳು.

ಅರ್ಜುನನು ಕೊಳದ ಸೆರಗಿನ ಕೋಮಲ ಹೊಸ ಹಸುರಿನ ಮೃದು ಮೆತ್ತೆಯಲ್ಲಿ, ಮಾವಿನ ಮರದ ಕೆಳಗಿನ ಸೊಂಪಿನಲ್ಲಿ ಪದ್ಮಾಸನನಾಗಿ ಕುಳಿತಿದ್ದನು. ಅವನು ಕಣ್ಣೆನದೃಷ್ಟಿ ಹರಿವ ನೀರ ಎದುರಿನಲ್ಲಿಯ ದೃಶ್ಯವನ್ನು ಕಂಡು ನಿಬ್ಬೆರಗಾದನು!

ಅದೊ ಕಿವಿಗೊಟ್ಟು ಕೇಳುತ್ತಿದ್ದಾನೆ! ಅವನ ಕರ್ಣಗಳಿಗೆ ಗಂಧರ್ವ ಮಧುರ ಗಾಯನ ಧಾರೆ ಬೀಳುತ್ತಿದೆ. ಸ್ತ್ರೀ ಗಾಯನದ ಸಂಗೀತ ಹೊಳೆ ಅಲ್ಲೋಲಕಲ್ಲೋಲವಾಗಿ ಚಂಚಲ ತರಂಗದಂತೆ ಪ್ರವಹಿಸುತ್ತ, ಬೆಟ್ಟದಿಂದ ಕೆಳಕ್ಕೆ ಹರಿಯುವ ಪ್ರವಾಹದಂತಿದೆ. ಅದು ನಿಧಾನವಾಗಿ ಹರಿದು ಬರುತ್ತ ವನದ ಕೊಳವನ್ನು ಭೂಮಿಯನ್ನು ಆಕಾಶ ವನ್ನು ಪರ್ವತಪ್ರಾಂತವನ್ನು ಚುಂಬಿಸಿ ಆಲಂಗಿಸುತ್ತ ಮಧು ಜಗವನ್ನು ಆನಂದ ಮೂರ್ಛೆಯಿಂದ ಮಲಗಿಸಿತು!

(ಸಶೇಷ)